# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2003 |
| ಸದಸ್ಯರ ಹೆಸರು | : | ಶ್ರೀ ಪ್ರತಾಪ್ ಸಿಂಹ ನಾಯಕ್. ಕೆ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 16-03-2022. |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಪ್ರಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಬೆಂಗಳೂರು – ಮಂಗಳೂರು ಹೆದ್ದಾರಿಯ ಹಾಸನದಿಂದ ಸಕಲೇಶಪುರದವರೆಗಿನ ರಸ್ತೆಯು ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ರಾಷ್ಟ್ರೀಯ ಹೆದ್ದಾರಿ-75ರ ಹಾಸನದಿಂದ-ಮಾರನಹಳ್ಳಿಯವರೆಗೆ ಕಿ.ಮೀ 189.700 (ವಿನ್ಯಾಸ ಚೈನೇಜ್ ಕಿ.ಮೀ 184.912) ದಿಂದ ಕಿ.ಮೀ 237.060 (ವಿನ್ಯಾಸ ಚೈನೇಜ್ ಕಿ.ಮೀ. 230.060) ವರೆಗಿನ 4 ಪಥದ ಒಟ್ಟು ಕಿ.ಮೀ 45.148 ವರೆಗಿನ ರಸ್ತೆಯು ರೂ.537.92 ಕೋಟಿಗಳ ಮೊತ್ತಕ್ಕೆ ಅನುಮೋದನೆಯಾಗಿರುತ್ತದೆ.<br><br>ಕಾಮಗಾರಿಗೆ ಅನುಮೋದನೆಯನ್ನು ದಿನಾಂಕ: 29.12.2015ರಲ್ಲಿ ದೊರೆತಿರುತ್ತದೆ.<br><br>M/s. Isolux Corsan India Engineering and Construction Private Limited ಇವರಿಗೆ ಗುತ್ತಿಗೆ ವಹಿಸಲಾಗಿರುತ್ತದೆ ಹಾಗೂ M/s. Rajkamal Builders, Private Limited, ರವರಿಗೆ ಉಪಗುತ್ತಿಗೆಯನ್ನು ನೀಡಲಾಗಿರುತ್ತದೆ.<br><br>ದಿನಾಂಕ: 31.03.2016 ರಂದು ಕರಾರು ಗುತ್ತಿಗೆಯನ್ನು ವಹಿಸಲಾಗಿರುತ್ತದೆ ಹಾಗೂ ದಿನಾಂಕ: 06.03.2017 ರಂದು ನೇಮಕಾತಿ ದಿನಾಂಕವನ್ನು ನೀಡಲಾಗಿರುತ್ತದೆ.<br><br>ಈ ಕಾಮಗಾರಿಯು ಗುತ್ತಿಗೆ ಕರಾರಿನಂತೆ ಕಾಮಗಾರಿ ನಿರ್ಮಾಣ ಅವಧಿಯು ಮಾರ್ಚ್ 2017 ರಿಂದ ಮಾರ್ಚ್ 2019ರವರೆಗೆ ಇರುತ್ತದೆ. ನಂತರ ಅವಧಿಯನ್ನು ಪರಿಷ್ಕರಿಸಿ ದಿನಾಂಕ: 10.03.2022ರವರೆಗೆ ನೀಡಲಾಗಿರುತ್ತದೆ. |
| ಆ) | ರಸ್ತೆಯು ಸಂಪೂರ್ಣವಾಗಿ ಹಾಳಾಗಿರುವ ಕಾರಣಕ್ಕಾಗಿ ಈ ಪ್ರದೇಶದಲ್ಲಿ ಅತಿ ಹೆಚ್ಚು ಅಪಘಾತಗಳಾಗುತ್ತಿದ್ದು, ಇದಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ; | E.P.C. ಗುತ್ತಿಗೆದಾರರ ಆರ್ಥಿಕ ಮುಗ್ಗಟ್ಟಿನಿಂದಾಗಿ (ದಿವಾಳಿತನ) ಮತ್ತು ಕರಾರು ಒಪ್ಪಂದದ ಹೊಣೆಗಾರಿಕೆ ಯಿಂದಾಗಿ ಉಪಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗತಿಯಲ್ಲಿ ಕೈಗೊಳ್ಳುವಲ್ಲಿ ವಿಫಲರಾಗಿರುತ್ತಾರೆ.<br><br>ಅಲ್ಲದೆ ಈ ಕೆಳಕಂಡ ಕಾರಣಗಳಿಂದಾಗಿ ಯೋಜನೆ ವಿಳಂಬವಾಗಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ.<br>1. ಕ್ವಾರಿ ಪ್ರದೇಶಕ್ಕೆ ಮತ್ತು ಬ್ಲಾಸ್ಟಿಂಗ್ ಮಾಡಲು ಅನುಮೋದನೆ ದೊರೆಯದ ಕಾರಣ.<br>2. ಮುಖ್ಯ ಗುತ್ತಿಗೆದಾರನ ಆರ್ಥಿಕ ಮುಗ್ಗಟ್ಟಿನಿಂದಾಗಿ (ದಿವಾಳಿತನ). |

| | | |
|---|---|---|
| | | 3. ಕೋವಿಡ್-19 ನಿಂದಾಗಿ ಎರಡು ಬಾರಿ ಸಂಪೂರ್ಣ ಲಾಕ್‌ಡೌನ್ ಆಗಿದ್ದರಿಂದ.<br>4. ಭಾರಿ ಮಳೆಯಿಂದಾಗಿ ಕಾಮಗಾರಿಯು ವಿಳಂಬವಾಗಿರುತ್ತದೆ.<br><br>ಮೇಲೆ ತಿಳಿಸಿರುವ ಅಂಶಗಳ ಹೊರತಾಗಿಯೂ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ರವರು ಪ್ರಸ್ತುತ ಈ ರಸ್ತೆಯು ಹಾಳಾಗಿದ್ದು, ಸದರಿ ರಸ್ತೆಯು ದುರಸ್ಥಿ ಕಾರ್ಯ ಕೈಗೊಂಡು, ರಸ್ತೆಯನ್ನು ಸುಸ್ಥಿತಿಯಲ್ಲಿಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರುಸ್ತುತ ಕಾಮಗಾರಿಯು ಪ್ರಗತಿಯಲ್ಲಿದ್ದು ಶೇ.40 ರಷ್ಟು ಭೌತಿಕವಾಗಿ ಕಾಮಗಾರಿಯನ್ನು ಪೂರ್ಣಗೊಳಿಸ ಲಾಗಿದೆ ಹಾಗೂ ಶೇ. 36.50 ರಷ್ಟು ಆರ್ಥಿಕ ಪ್ರಗತಿ ಸಾದಿಸಲಾಗಿದೆ ಎಂದು ವರದಿ ಸಲ್ಲಿಸಿರುತ್ತಾರೆ.<br><br>ಇದಲ್ಲದೆ ಮೇಲೆ ಪ್ರಸ್ತಾಪಿಸಿದ ರಸ್ತೆಯು 4 ಲೇನ್‌ಗೆ ಅಪ-ಗ್ರೇಡ್ ಮಾಡಲಾಗುತ್ತಿದೆ ಮತ್ತು 4 ಲೇನ್ ರಸ್ತೆಯು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು. |
| ಇ) | ಈ ರಸ್ತೆಯು ಸಂಪೂರ್ಣವಾಗಿ ದುರಸ್ಥಿಯಾಗಿ ಸಾರ್ವಜನಿಕರ ಉಪಯೋಗಕ್ಕಾಗಿ ಯಾವಾಗ ದೊರೆಯುತ್ತದೆ.? | ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ರವರು ತಿಳಿಸಿರುವಂತೆ ಸದರಿ ಯೋಜನೆಯನ್ನು ಮಾರ್ಚ್-2023 ರೊಳಗೆ ಪೂರ್ಣಗೊಳಿಸಲು ಕ್ರಮವನ್ನು ಕೈಗೊಳ್ಳಲಾಗಿರುತ್ತದೆ. |

ಕಡತ ಸಂಖ್ಯೆ: ಲೋಇ 103 ಸಿಎನ್‌ಹೆಚ್ 2022 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು